UASB Library
Newspaper Clippings
Friday 18-11-2022 Pg .1
Jai Kisan

ದಾವಣಗೆರೆ ಬಾಪೂಜಿ ಕಾಲೇಜಿನ ಬಯೋ ಟೆಕ್ನಾಲಜಿ ವಿದ್ಯಾರ್ಥಿಗಳ ಆನ್ವೇಷಣೆ

ಅಡಕೆ ಸಿಪ್ಪೆಯಿಂದ ಸ್ಯಾನಿಟರಿ ಪ್ಯಾಡ್, ಡೈಪರ್

■ ದೇವರಾಜ್ ಕನಕಪುರ ಬೆಂಗಳೂರು
devaraj.l@timesgroup.com

ಅಡಕೆ ಸುಲಿದ ಮೇಲೆ ಬಿನಾಡುವ ಸಿಪ್ಪೆ ಕೂಡ ಉಪಯೋಗಕ್ಕೆ ಬರಲಿದೆ. ಇದರಿಂದಲೇ 'ಸ್ಯಾನಿಟರಿ ಪ್ಯಾಡ್', 'ಡೈಪರ್' ಕೂಡ ತಯಾರಿಸಬಹುದು ಎಂಬುದನ್ನು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಾಬೀತುಪಡಿಸಿದ್ದಾರೆ. ಈ ಪ್ಯಾಡ್ ಕೇವಲ 4 ರೂಪಾಯಿಗೆ ಸಿಗಲಿದೆ.



ಹೌದು, ದಾವಣಗೆರೆಯ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ (ಬಿಐಇಟಿ) ಕಾಲೇಜಿನ ಬಯೋ ಟೆಕ್ನಾಲಜಿ ವಿಭಾಗದ ವಿದ್ಯಾರ್ಥಿಗಳ ತಂಡ ಡಾ.ಎನ್.ಎಸ್.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆ ಮಾಡಿದೆ. ಸ್ಯಾನಿಟರಿ ಪ್ಯಾಡ್ ಮತ್ತು ಡೈಪರ್‌ಗಳನ್ನು ಬೆಂಗಳೂರು ಟೆಕ್ ಶೃಂಗ ಸಭೆಯಲ್ಲಿ ಪ್ರದರ್ಶನಕ್ಕಿಡಲಾಗಿದೆ. ಸಂಶೋಧನೆ ಪ್ರಗತಿಗಾಗಿ ರಾಜ್ಯ ಸರಕಾರ 'ನ್ಯೂ ಏಜ್ ಇನ್ನೋವೇಷನ್ ನೆಟ್‌ವರ್ಕ್' ಯೋಜನೆಯಡಿ 1.80 ಲಕ್ಷ ರೂ.ಅನುದಾನವನ್ನೂ ನೀಡಿದೆ.

ತಯಾರಿಕೆ ಹೇಗೆ?: ಅಡಕೆ ಸಿಪ್ಪೆಯನ್ನು ತಂತ್ರಜ್ಞಾನದ ಸಹಾಯದಿಂದ ನಾರಿನ ರೀತಿಯಲ್ಲಿ ಸಿದ್ಧಪಡಿಸಿ ಅದಕ್ಕೆ ಸೋಡಿಯಂ ಕ್ಲೋರೈಡ್ ಹಾಕಿ ಮೃದುವಾಗುವಂತೆ ಮಾಡಲಾಗುತ್ತದೆ. ಆನಂತರ ಇದಕ್ಕೆ 'ಸೋಡಿಯಂ ಪಾಲಿಕ್ರಿಲೇಟ್' ರಸಾಯನಿಕ ವಸ್ತು ಸೇರ್ಪಡಿಸಿ ತೇವಾಂಶ ಹಿಡಿದಿಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಆನಂತರ ಇದನ್ನು ಸ್ಯಾನಿಟರಿ ಪ್ಯಾಡ್ ರೂಪಕ್ಕೆ ತರಲಾಗುತ್ತದೆ. ಹಕ್ಕು ಸ್ವಾಮ್ಯತೆ ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾಲೇಜು ನಿರತವಾಗಿದೆ.

ಅನುದಾನ ಅಗತ್ಯ: ದಾವಣಗೆರೆಯ ಸುತ್ತಮುತ್ತಲಿನ ಹಳ್ಳಿಗಳ ವಿದ್ಯಾರ್ಥಿನಿಯರಿಗೆ ಈ 'ಸ್ಯಾನಿಟರಿ ಪ್ಯಾಡ್' ನೀಡಿ ಬಳಕೆಗೆ ಯೋಗ್ಯ ಎಂಬುದನ್ನು ಖಚಿತ ಪಡಿಸಿಕೊಳ್ಳಲಾಗಿದೆ. ಸದ್ಯ ಈ ಯೋಜನೆಗೆ ನೀಡಲಾಗಿರುವ ಅನುದಾನ ಸಂಪೂರ್ಣ ಬಳಕೆಯಾಗಿದ್ದು, ಇದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾದರೆ ಮತ್ತಷ್ಟು ಅನುದಾನದ ಅವಶ್ಯಕತೆ ಇದೆ. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಿದ್ದಲ್ಲಿ, ಪ್ರತಿ ಪ್ಯಾಡ್‌ಗೆ 4.80 ರೂ.ಗಳಲ್ಲಿ ಜನರಿಗೆ ಸಿಗಲಿದೆ.



ನರಮಂಡಲ ಮಾಹಿತಿಗೆ ನ್ಯೂರೋ ಹೆಲ್ಮೆಟ್

ಮನುಷ್ಯನ ನರಮಂಡಲದ ಕಾರ್ಯವೈಖರಿ, ಆರೋಗ್ಯದ ಸ್ಥಿತಿ ಅರಿಯುವುದಕ್ಕಾಗಿ ನ್ಯೂರೋ ಹೆಲ್ಮೆಟ್ ಬಂದಿದೆ. ಇದನ್ನು ಐಟಿಐಇ ಕಂಪನಿಯ ಸಂಸ್ಥಾಪಕ ಡಾ.ಸಂಜೀವ್ ಕುಬಕಡ್ಡಿ ಅವರು ಆನ್ವೇಷಣೆ ಮಾಡಿದ್ದಾರೆ. ಅರ್ಧ ಗಂಟೆ ಈ ಹೆಲ್ಮೆಟ್ ಧರಿಸಿ ಕೂರುವುದರಿಂದ ತಂತ್ರಜ್ಞಾನದ ಮೂಲಕ ನರವ್ಯೂಹದ ಆರೋಗ್ಯ ಪರಿಸ್ಥಿತಿಯನ್ನು ಪತ್ತೆ ಹಚ್ಚಬಹುದು. ನಿಮ್ಹ್ಯಾನ್ಸ್ ನಂತಹ ಆಸ್ಪತ್ರೆಗಳು ಈ ಸಾಧನವನ್ನು ಬಳಕೆ ಮಾಡುತ್ತಿವೆ.

ಕಳೆದ ಒಂದೆರಡು ವರ್ಷಗಳಿಂದ ಈ ಪ್ಯಾಡ್ ಮತ್ತು ಡೈಪರ್ ಕುರಿತು ಸಂಶೋಧನೆ ನಡೆಸಲಾಗುತ್ತಿತ್ತು. ಈಗ ಕಾರ್ಯರೂಪಕ್ಕೆ ತರಲಾಗಿದೆ. ಬಂಡವಾಳ ಹೂಡಿಕೆ ಮಾಡುವ ಕಂಪನಿ ಸಿಕ್ಕರೆ, ತಕ್ಷಣವೇ ಉತ್ಪಾದನೆ ಮಾಡಬಹುದು.

-ಡಾ.ಎನ್.ಎಸ್.ಮಂಜುನಾಥ್
ಪ್ರಾಧ್ಯಾಪಕರು, ಬಯೋ ಟೆಕ್ನಾಲಜಿ ವಿಭಾಗ

ಪರಿಸರ ಸ್ನೇಹಿ

ಹಾಲಿ ಮಾರುಕಟ್ಟೆಯಲ್ಲಿರುವ ಪ್ಯಾಡ್‌ಗಳಲ್ಲಿ ಪ್ಲಾಸ್ಟಿಕ್ ಅಂಶ ಹೆಚ್ಚಾಗಿದ್ದು, ಇದನ್ನು ವಿಲೇವಾರಿ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ಆದರೆ, ಅಡಕೆ ಸಿಪ್ಪೆಯ ಪ್ಯಾಡ್‌ಗಳು ಭೂಮಿಯಲ್ಲಿ ಕರಗುವ ಅಂಶವನ್ನು ಹೊಂದಿರುವುದರಿಂದ ಪರಿಸರ ಸ್ನೇಹಿಯಾಗಿವೆ. ಬಳಕೆಯ ನಂತರ ಮಣ್ಣಿಗೆ ಹಾಕಿದರೆ ಸಾಕು, ಅದು ಎರಡು ಮೂರು ದಿನಗಳಲ್ಲಿ ಮಣ್ಣಿನಲ್ಲಿ ಕರಗಿ ಹೋಗಲಿದೆ. ಸಾಮಾನ್ಯವಾಗಿ ಅಡಕೆ ಬೆಳೆಗಾರರು ಅಡಕೆ ಸುಲಿದ ನಂತರ ಬರುವ ಸಿಪ್ಪೆಯನ್ನು ರಸ್ತೆಯಲ್ಲಿ ಬಿಸಾಡುತ್ತಾರೆ. ಕೆಲವು ಕಡೆ ಅದನ್ನು ಸುಟ್ಟು ಹಾಕುತ್ತಾರೆ. ಇದರಿಂದ ರೈತರಿಗೆ



ಯಾವುದೇ ಆದಾಯ ಇಲ್ಲ. ಇದನ್ನೇ ಪ್ಯಾಡ್‌ಗೆ ಕಚ್ಚಾವಸ್ತುವಾಗಿ ಬಳಕೆ ಮಾಡಿಕೊಳ್ಳುವುದರಲ್ಲಿ ಬಿಐಇಟಿ ತಂಡ ಯಶಸ್ವಿಯಾಗಿದೆ.

18-11-2022 V-karnataka Pg 09

18-11-2022 V-karnataka Pg 02

ರಾಜ್ಯದಲ್ಲಿ ಅಡಕೆ ಕ್ಷೇತ್ರ ವಿಸ್ತರಣೆಗೆ ಕಳವಳ

ಕ್ಯಾಂಪ್ಕೊ ಅಧ್ಯಕ್ಷ ಕಿಶೋರಕುಮಾರ ಕೊಡ್ಗಿ । ಕೋಟಿಗಳ ಲೆಕ್ಕದಲ್ಲಿ ಗಿಡ ನೆಡುತ್ತಿರುವ ನೆರೆ ರಾಜ್ಯಗಳು

■ ವಿಕ ಸುದ್ದಿಲೋಕ ಶಿರಸಿ (ಉ.ಕ.)

ಅಡಕೆ ಬೆಳೆ ನಿರೀಕ್ಷೆಗೂ ಮೀರಿ ವಿಸ್ತರಣೆ ಆಗುತ್ತಿದೆ. ಇದು ಪರಿಸ್ಥಿತಿಯನ್ನು ಎಲ್ಲಿಗೆ ಮುಟ್ಟಿಸುತ್ತದೆ ಎಂಬ ಬಗ್ಗೆ ಆತಂಕವಾಗುತ್ತಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರಕುಮಾರ ಕೊಡ್ಗಿ ಆತಂಕ ವ್ಯಕ್ತಪಡಿಸಿದರು.

ಸಹಕಾರಿ ಸಪ್ತಾಹದ ಅಂಗವಾಗಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ರೈತರೊಂದಿಗೆ ಸಂವಾದದಲ್ಲಿ ಮಾತನಾಡಿದರು.

''ಅಡಕೆ ಬೆಳೆ ರಾಜ್ಯದ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಿಕೊಂಡಿದೆ. ಆಂಧ್ರ, ತಮಿಳುನಾಡಿನಲ್ಲಿ ಕೋಟಿ ಲೆಕ್ಕದಲ್ಲಿ ಅಡಕೆ ಗಿಡ ನೆಡುತ್ತಿದ್ದಾರೆ. ಇನ್ನೊಂದೆಡೆ ಕೇರಳದಲ್ಲಿ ರಬ್ಬರ್ ಮರ ಕಡಿದು ಆ ಜಾಗದಲ್ಲಿ ಅಡಕೆ ಬೆಳೆಯಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ಭೂತಾನಿನಿಂದ ಹಸಿ ಅಡಕೆ ಆಮದಿಗೆ ಹಸಿರು ನಿಶಾನೆ ತೋರಿದೆ. ಭೂತಾನ್ ಪಕ್ಕದ ರಾಷ್ಟ್ರವಾಗಿದ್ದು, ಆರ್ಥಿಕವಾಗಿ ದುರ್ಬಲವಾಗಿದ್ದರಿಂದ ಈ ವ್ಯಾಪಾರವನ್ನು ತಪ್ಪು ಎಂದು ಹೇಳಲೂ ಸಾಧ್ಯವಿಲ್ಲ. ಆದರೆ, ಅಡಕೆ ಆಮದಿನ ಬದಲು ಆ ರಾಷ್ಟ್ರಕ್ಕೆ ಆರ್ಥಿಕವಾಗಿಯೇ ಸಹಾಯ ಮಾಡಬಹುದಾಗಿತ್ತು,'' ಎಂದರು.



ಹಾರೂಗಾರ್ ಗ್ರೂಪ್ ಗ್ರಾಮಗಳ ಸಹಕಾರಿ ಸಂಘದಲ್ಲಿ ನಡೆದ ಸಂವಾದದಲ್ಲಿ ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರಕುಮಾರ ಕೊಡ್ಗಿ ಮಾತನಾಡಿದರು.

''ಅಡಕೆ ಬೆಳೆಗಾರರು ಉಳಿಯಬೇಕಂದರೆ ಆಮದು ಅಡಕೆಗೆ ಶುಲ್ಕ ನೀಡಬೇಕು. ಈ ಹಿನ್ನೆಲೆಯಲ್ಲಿ ಕ್ಯಾಂಪ್ಕೊ ಹಾಗೂ ಇತರ ಸಂಸ್ಥೆಗಳು ಪ್ರಧಾನಿಗೆ ಪತ್ರ ಬರೆದಿದ್ದು, ಪ್ರತಿ ಕೆಜಿಗೆ ಕೆಂಪಡಕೆ 409, ಬಿಳಿ ಅಡಕೆ 360 ರೂ. ದರ ನಿಗದಿಪಡಿಸಬೇಕು. ಇದಕ್ಕೂ ಕೆಳ ದರದಲ್ಲಿ ಅಡಕೆ ಆಮದಾದರೆ ರೈತರ ಉಳಿಕೆ ಕಷ್ಟ, ಈ ದರ ನಿಗದಿಪಡಿಸಿದರೆ ಸ್ಥಳೀಯ ಮಾರುಕಟ್ಟೆಯಲ್ಲೂ ಪ್ರತಿ ಕೆಜಿಗೆ 450 ರೂ. ದೊರೆಯಲಿದೆ. ಈ ಕುರಿತಂತೆ ಕೇಂದ್ರ ಕೃಷಿ ಮಂತ್ರಿಗಳು, ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ ಅವರಿಗೂ ಪತ್ರ ಬರೆದಿದ್ದೇವೆ,'' ಎಂದರು.

ಕದಂಬ ಸಹಕಾರಿ ಸಂಸ್ಥೆ ಅಧ್ಯಕ್ಷ ಶಂಭುಲಿಂಗ ಹೆಗಡೆ ಮಾತನಾಡಿದರು. ಸಂವಾದದಲ್ಲಿ ನೂರಕ್ಕೂ ಅಧಿಕ ಜನ ಭಾಗವಹಿಸಿದ್ದರು.

15ಲಕ್ಷ ಮೆಟ್ರಿಕ್ ಟನ್ ಅಡಕೆ ಉತ್ಪಾದನೆ

ರಾಜ್ಯದಲ್ಲಿ 15ಲಕ್ಷ ಮೆಟ್ರಿಕ್ ಟನ್‌ನಷ್ಟು ಅಡಕೆ ಉತ್ಪಾದನೆ ಆಗುತ್ತಿದೆ. ಆದರೆ, ಶೇ.15ರಷ್ಟು ಅಡಕೆ ಮಾತ್ರ ಸಹಕಾರಿ ಸಂಘಗಳ ಮೂಲಕ ವ್ಯಾಪಾರ ಆಗುತ್ತಿದೆ. ಉಳಿದ ಅಡಕೆ ಖಾಸಗಿ ವರ್ತಕರ ಮೂಲಕ ವ್ಯಾಪಾರ ಮಾಡುತ್ತಿದ್ದಾರೆ. ಅಡಕೆ ಆರೋಗ್ಯಕ್ಕೆ ಹಾನಿಕರವಲ್ಲ ಎಂದು ವೈಜ್ಞಾನಿಕವಾಗಿ ಸಂಶೋಧಿಸುವ, ನ್ಯಾಯಾಲಯದಲ್ಲಿ ಅಡಕೆ ಪರ ಹೋರಾಟ ಮಾಡುವ ಕಾರ್ಯವನ್ನು ಸಹಕಾರಿ ಸಂಘಗಳೇ ಮಾಡುತ್ತಿವೆ ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರಕುಮಾರ ಕೊಡ್ಗಿ ಹೇಳಿದರು.

ಭೂತಾನ್ ಅಡಕೆ ಆಮದು ನಿರ್ಧಾರದಿಂದ ಧಾರಣೆ ಹಿಮ್ಮುಖ

ಅಡಕೆ ದರ ಕುಸಿತ, ಆರ್ಥಿಕ ಸಂಕಷ್ಟ

◆ ರಮೇಶ್ ಕರುವಾನೆ

ಶೃಂಗೇರಿ: ಮಲೆನಾಡಿನ ಆರ್ಥಿಕ ಜೀವಾಳವಾಗಿದ್ದ ಅಡಕೆ ದರ ದಿಢೀರ್ ಕುಸಿದಿದ್ದು, ಅಡಕೆ ಬೆಳೆಗಾರರು ಆತಂಕಕ್ಕೊಳಗಾಗಿದ್ದಾರೆ.

ಕಳೆದ ಎರಡು ವರ್ಷದಿಂದ ಅಡಕೆ ಧಾರಣೆಯಲ್ಲಿ ಸ್ಥಿರತೆ ಕಾಯ್ದುಕೊಂಡಿದ್ದರಿಂದ ಬೆಳೆಗಾರರು ನಿರಾಳರಾಗಿದ್ದರು. ಆದರೆ ಈಗ ಬೆಲೆ ಇಳಿಮುಖವಾಗಿರುವುದು ಆತಂಕಗೊಂಡಿದ್ದಾರೆ. ಭೂತಾನ್ ದೇಶದಿಂದ ಅಡಕೆಯನ್ನು ಆಮದು ಮಾಡಿಕೊಳ್ಳುವ ಬಗ್ಗೆ ಸರ್ಕಾರ ನಿರ್ಧರಿಸಿದ ಹಿನ್ನೆಲೆಯಲ್ಲಿ ದರ ಹಿಮ್ಮುಖವಾಗಿದೆ ಎಂದು ಹೇಳಲಾಗುತ್ತಿದೆ.

ಇದೀಗ ಬಯಲುಸೀಮೆ ಭಾಗದಲ್ಲಿ ಅಡಕೆ ಮಾರುಕಟ್ಟೆಗೆ ಬಂದ ಹಿನ್ನೆಲೆಯಲ್ಲಿ ಧಾರಣೆ ಕೊಂಚ ಕಡಿಮೆ ಆಗಿದೆ ಎಂದು ದಲ್ಲಾಳಿಗಳು ಹೇಳುತ್ತಿದ್ದಾರೆ. ಅಡಕೆಗೆ ಒಳ್ಳೆ ಧಾರಣೆಯೇ ಇದೆ. ರೈತರು ಇಷ್ಟು ಧಾರಣೆ ಬಂದರೂ ಅಡಕೆ ಮಾರಾಟ ಮಾಡದೆ ಮತ್ತಷ್ಟು ಹೆಚ್ಚಿನ ಧಾರಣೆಗಾಗಿ ಕಾಯುತ್ತಿದ್ದುದು ಬೆಳೆಗಾರರಿಗೆ ಈಗ ಬಿಸಿತುಪ್ಪವಾಗಿ ಪರಿಣಮಿಸಿದೆ.

ಕಳೆದ ಭಾನುವಾರ ಶೃಂಗೇರಿ ಮ್ಯಾಮ್ಕೋಸ್



ಶೃಂಗೇರಿ ತಾಲ್ಲೂಕಿನ ರೈತರೊಬ್ಬರ ಮನೆಯಲ್ಲಿ ಯಂತ್ರದ ಸಹಾಯದಿಂದ ಅಡಿಕೆ ಸುಲಿತ ಕಾರ್ಯ ನಡೆಯುತ್ತಿರುವುದು.

ಸಂಸ್ಥೆಯಲ್ಲಿ ಹಸಿ ಅಡಕೆ ಕ್ವಿಂಟಾಲಿಗೆ 38,099-71,000 ಸರಾಸರಿ ಧಾರಣೆ 62,689, ಬೆಟ್ಟೆ 47,299-49,369 ಸರಾಸರಿ ಧಾರಣೆ 48,869, ರಾಶಿ ಇಡಿ 41,299-46,699 ಸರಾಸರಿ 45,699, ಗೊರಬಲು 33,009-36,199

> ಕೆಲವೇ ವರ್ಷಗಳಲ್ಲಿ ಮಲೆನಾಡಿನಲ್ಲಿ ಅಡಿಕೆ ತೋಟ ಗಳು ನಾಶವಾಗುತ್ತದೆ. ಒಂದಿಲ್ಲೊಂದು ರೋಗಗಳು ಅಡಿಕೆಗೆ ಬಂದಿರುವುದರಿಂದ ತೋಟವು ಉಳಿಸಿ ಕೊಳ್ಳುವುದೇ ಕಷ್ಟಸಾಧ್ಯವಾಗಿದೆ ಮಲೆನಾಡಿನಲ್ಲಿ ಕೃಷಿ ಅಪಾಯದ ಅಂಚಿಗೆ ಬಂದು ನಿಂತಿದೆ.
>
> ■ ಕಲ್ಕುಳಿ ಮಂಜುನಾಥ್, ಕೃಷಿಕ

ದಿಗಂತ ವಿಶೇಷ

ಸರಾಸರಿ ಧಾರಣೆ 35,399 ದಾಖಲಾಗಿದೆ. ಆದರೆ 15-20 ದಿನದಿಂದ ಸರಾಸರಿ ಧಾರಣೆ ಕ್ವಿಂಟಾಲಿಗೆ 3,000 ರೂ. ಕಡಿಮೆ ಆಗಿದೆ ಎನ್ನುತ್ತಾರೆ, ಉದ್ಯಮಿ ಹಂಚಲಿ ಕೃಷ್ಣಮೂರ್ತಿರಾವ್. ವಿಶೇಷವೆಂದರೆ ಕಳೆದ ವರ್ಷವೂ ಇದೇ ಅವಧಿಯಲ್ಲಿ ಇದೇ ತರನಾದ ಧಾರಣೆ ಚಾಲ್ತಿಯಲ್ಲಿತ್ತು.

ಅಡಕೆಗೆ ಮುಗಿಯದ ರೋಗ ಬಾಧೆ

ಅಡಕೆಗೆ ಆಗಾಗ ಒಂದಿಲ್ಲೊಂದು ಸಮಸ್ಯೆ ಕಾಡುತ್ತಲೇ ಇರುತ್ತದೆ. ಆದರಲ್ಲೂ ಮಲೆನಾಡಿನ ಭಾಗದಲ್ಲಿಯೇ ಕಳೆದ 2-3 ವರ್ಷದಿಂದ ಅತಿಯಾದ ಮಳೆಯಿಂದ ರೈತರ ಅಡಕೆ ತೋಟದಲ್ಲಿ ಕೊಳೆ ರೋಗ ತಗುಲಿತ್ತು. ಇದೀಗ ಅಡಕೆಗೆ ವ್ಯಾಪಕವಾಗಿ ಎಲೆಚುಕ್ಕಿ ರೋಗ ಬಾಧಿಸುತ್ತಿದೆ. ಅತಿಯಾದ ಮಳೆಯಿಂದಾಗಿಯೇ ಶಿಲೀಂಧ್ರ ದಿಂದಾಗಿ ಅಡಕೆಗೆ ಎಲೆಚುಕ್ಕಿ ರೋಗ ಬರಲು ಕಾರಣ ಎನ್ನುತ್ತಾರೆ ವಿಜ್ಞಾನಿಗಳು. ಮೊದಲೇ ಮಲೆನಾಡು ಭಾಗದಲ್ಲಿ ಶೇ.50 ರಷ್ಟು ಅಡಕೆ ತೋಟಗಳು ಹಳದಿ ಎಲೆ ರೋಗಕ್ಕೆ ತುತ್ತಾಗಿದೆ. ಇದೀಗ ಅಡಕೆಗೆ ಎಲೆಚುಕ್ಕಿ ರೋಗವೂ ಅಂಟಿಕೊಂಡಿದೆ. ಹಳದಿ ಎಲೆ ರೋಗವಾದರೂ ತಕ್ಷಣವೇ ತೋಟಕ್ಕೆ ಹಾನಿಯಾಗಲಾರದು. ಕ್ರಮೇಣವಾಗಿ ತೋಟ ನಾಶವಾಗುತ್ತದೆ. ಆದರೆ ಎಲೆಚುಕ್ಕಿ ರೋಗ ಮಾತ್ರ ಒಂದೆರಡು ವರ್ಷದಲ್ಲೇ ಅಡಕೆ ಮರಗಳೇ ಸಾಯುತ್ತವೆ. ಒಮ್ಮೆಲೆ ಅಡಕೆ ಎಲೆಗಳು ಕೆಂಪಾಗಿ ಒಣಗಿ ನಿಸ್ತೇಜಗೊಳ್ಳುತ್ತವೆ. ಹೀಗಾಗಿ ಅಡಕೆ ಬೆಳೆಗಾರ ಸಂಕಟ ಅನುಭವಿಸುವಂತಾಗಿದೆ.

18-08-2022
V-karnataka
Pg 05

ಬುಡಮೇಲಾಗುತ್ತಿರುವ ಅಡಕೆ

ಕಾರಣ ಯಾರಿಗೂ ಗೊತ್ತಿಲ್ಲ | ಕೃಷಿ ಅಧಿಕಾರಿಗಳು, ತಜ್ಞರ ಸುಳಿವೇ ಇಲ್ಲ

■ ರಾಘವೇಂದ್ರ ಮೇಗರವಳ್ಳಿ
ತೀರ್ಥಹಳ್ಳಿ (ಶಿವಮೊಗ್ಗ)
mkrtth@gmail.com

ಅಡಕೆ ಬೆಳೆಗೆ ಕೊಳೆ, ಹಳದಿ ಎಲೆ ಮತ್ತು ಎಲೆಚುಕ್ಕಿ ರೋಗ ಕಾಣಿಸಿಕೊಂಡು ಮರಗಳು ನಾಶವಾಗುವ ಹಂತ ತಲುಪುತ್ತಿರುವ ಸಮಯದಲ್ಲೇ ಮಲೆನಾಡಿನಲ್ಲಿ ಹೊಸ ರೋಗ ಕಾಣಿಸಿಕೊಂಡಿದೆ. ಇದರಿಂದ ರೈತರು ಆತಂಕಗೊಂಡಿದ್ದಾರೆ. ಸಮೃದ್ಧ ಹಸಿರಿನಿಂದ ಕಂಗೊಳಿಸುವ ಮೂರ್ನಾಲ್ಕು ವರ್ಷದ ಅಡಕೆ ಸಸಿಗಳು ಬುಡದಲ್ಲೆ ತುಂಡಾಗಿ ಮುರಿದು ಬೀಳುತ್ತಿವೆ. ಇದು ತೀರ್ಥಹಳ್ಳಿ ತಾಲೂಕು ತೂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ

ತೋಟಗಳಲ್ಲಿ ಹೆಚ್ಚಿದೆ. ಈ ವರ್ಷ ಎಲೆಚುಕ್ಕಿ ರೋಗ ಉಲ್ಬಣಿಸಿ ಇಡೀ ತೋಟ ಸರ್ವನಾಶವಾಗುವತ್ತ ಸಾಗಿದೆ. ಈಗ ಬೆಳೆಯುವ ಹಂತದಲ್ಲಿ ಫಲ ನೀಡುವ ಮುನ್ನ ಸಸಿಮರದ ಬುಡ ತುಂಡಾಗಿ ಉರುಳುತ್ತಿರುವುದು ರೈತರ ಜಂಘಾಬಲವೇ ಕುಸಿಯುವಂತಾಗಿದೆ.

ಕಾರಣವೇ ಗೊತ್ತಿಲ್ಲ: ಯಾವ ಕಾರಣಕ್ಕೆ ಮರಗಳು ತುಂಡಾಗಿ ಬೀಳುತ್ತಿವೆ ಎಂಬುದು ಗೊತ್ತಾಗಿಲ್ಲ. ತೋಟಗಾರಿಕೆ ಇಲಾಖೆ ಅಧಿಕಾರಿಗಳು ಅಥವಾ ಅಡಕೆ ಸಂಶೋಧನಾ





ತೀರ್ಥಹಳ್ಳಿ ತಾ. ತೂದೂರು ಗ್ರಾ.ಪಂ. ವ್ಯಾಪ್ತಿ ಅಡಕೆ ಸಸಿ ಬುಡ ತುಂಡಾಗಿ ಬಿದ್ದಿರುವುದು.

> ಅಡಕೆ ಇಲ್ಲದೆ ಮಲೆನಾಡಿನ ಯಾವುದೇ ವಹಿವಾಟು ಸಾಧ್ಯವಿಲ್ಲ. ಹವಾಮಾನ ವೈಪರೀತ್ಯ ಅಡಕೆಯನ್ನು ಮಾರಣಾಂತಿಕ ರೋಗಗಳು ಬಾಧಿಸುತ್ತಿವೆ. ಶಿವಮೊಗ್ಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಅಡಕೆ ಸಂಶೋಧನೆ ಸ್ಥಾಪಿಸುವ ಕುರಿತು ನೀಡಿದ ಭರವಸೆ ಈಡೇರಿಲ್ಲ.
>
> -ಬಿ.ಎ.ರಮೇಶ್‌ಹೆಗ್ಡೆ ಅಧ್ಯಕ್ಷರು, ಜಿಲ್ಲಾ ಅಡಕೆ ಬೆಳೆಗಾರರ ಸಂಘ, ಶಿವಮೊಗ್ಗ

ಕೇಂದ್ರದ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಯಾರು ಬಂದಿಲ್ಲ. ಸ್ಥಳೀಯರು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಿಡಿಓಗಳಿಗೆ ಮಾಹಿತಿ ನೀಡಿದರೂ ಪ್ರಯೋಜನವಾಗಿಲ್ಲ.

ಹುಸಿಯಾದ ಭರವಸೆ: 2018ರಲ್ಲಿ ತೀರ್ಥಹಳ್ಳಿಯಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಅಡಕೆ ಬೆಳೆಗಾರರ ಸಮಾವೇಶಕ್ಕೆ ಬಂದಿದ್ದ ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅಡಕೆ ಬೆಳೆಗಳಿಗೆ ತಗಲುವ ರೋಗಗಳಿಗೆ ಪರಿಹಾರ ಕಂಡು ಹಿಡಿಯಲು ಶಿವಮೊಗ್ಗದಲ್ಲಿ 500 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಸಂಶೋಧನಾ ಕೇಂದ್ರ ಸ್ಥಾಪಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಭರವಸೆಯು ನಾಲ್ಕು ವರ್ಷವಾದರೂ ಈಡೇರಿಲ್ಲ.

18-08-2022
Hosadiganta
Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ಹೊಸ ನೀತಿಗೆ ರಾಜ್ಯ ಸಂಪುಟ ನಿರ್ಧಾರ

ಖಾಸಗಿ ಬೆಳೆದ ಶ್ರೀಗಂಧ ಮುಕ್ತ ಮಾರಾಟಕ್ಕೆ ಅಸ್ತು



ಬೆಂಗಳೂರು: ಖಾಸಗಿ ಜಮೀನಿನಲ್ಲಿ ಶ್ರೀಗಂಧ ಬೆಳೆದು ಮುಕ್ತ ಮಾರಾಟಕ್ಕೆ ಅವಕಾಶ ನೀಡುವ ದೃಷ್ಟಿಯಿಂದ ಶ್ರೀಗಂಧ ನೀತಿ-2022 ಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಗುರುವಾರ ನಡೆದ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ನೂತನ ಶ್ರೀಗಂಧ ನೀತಿ - 2022ಕ್ಕೆ ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ. ಎಲ್ಲ ರೈತರಿಗೆ ಅವರ ಖಾಸಗಿ ಜಮೀನಿನಲ್ಲಿ ಶ್ರೀಗಂಧ ಬೆಳೆಯಲು ಹಾಗೂ ಮುಕ್ತ ಮಾರಾಟಕ್ಕೆ ಅವಕಾಶ ನೀಡಲಾಗಿದೆ ಎಂದರು.



ಶ್ರೀಗಂಧಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇರುವುದರಿಂದ ಹಾಗೂ ರೈತರ ಗಳಿಕೆ ಹೆಚ್ಚಿಸಬೇಕಾಗುವುದರಿಂದ ಅವರಿಗೆ ಪ್ರೋತ್ಸಾಹಿಸಲಾಗುತ್ತದೆ. ರಕ್ಷಣೆಯ ನಿಟ್ಟಿನಲ್ಲಿ ತಂತ್ರಜ್ಞಾನ ಬಳಕೆ ಮಾಡಲು, ಮರದಲ್ಲಿ ಚಿಪ್ ಅಳವಡಿಕೆಗೆ ಅವಕಾಶವಿದೆ. ಈ ಹಿಂದೆ ಶ್ರೀಗಂಧ ಮಾರಾಟ ಮಾಡಲು ನಿರ್ಬಂಧವಿತ್ತು, ನೂತನ ನೀತಿಯಲ್ಲಿ ಅದನ್ನು ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ನೂತನ ವನ್ಯಜೀವಿಧಾಮ: ರಾಜ್ಯದಲ್ಲಿ ಹೊಸದಾಗಿ ಉತ್ತಾರೆಗುಡ್ಡ ವನ್ಯಜೀವಿಧಾಮ, ಬಂಕಾಪುರ ವನ್ಯಜೀವಿಧಾಮ ಮತ್ತು ಅರಸೀಕೆರೆ ಕರಡಿ ಧಾಮಗಳ ಪ್ರಸ್ತಾಪಕ್ಕೆ ಒಪ್ಪಿಗೆ. ➡2

18-08-2022
Hosadiganta Pg 01

ಖಾಸಗಿ ಬೆಳೆದ ಶ್ರೀಗಂಧ ಮುಕ್ತ ಮಾರಾಟಕ್ಕೆ ಅಸ್ತು

➡1ಅಂತೆಯೇ ಹಿರೆಸೂಲೇಕೆರೆ ಕರಡಿ ಸಂರಕ್ಷಣಾ ಮೀಸಲು ಪ್ರದೇಶ, ಚಿಕ್ಕಸಂಗಮ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ, ಮುಂಡಿಗೆ ಕೆರೆ ಮತ್ತು ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ ಮತ್ತು ಬೋನಾಳ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶಗಳನ್ನು ಘೋಷಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ.

ಮುಂಬಯಿ, ಗೋವಾದಲ್ಲಿ ನಮ್ಮ ಎಳನೀರಿಗೆ ಬೇಡಿಕೆ

■ ಎಸ್.ಜಿ. ಕಿರಣ್
ಸಂತೇಬೆನ್ನೂರು (ದಾವಣಗೆರೆ)
Sbrkiran@gmail.com



ದಾವಣಗೆರೆ ಜಿಲ್ಲೆಯ ಸಂತೆಬೆನ್ನೂರಿನ ಬೆದ್ದಲು ಜಮೀನಿನ ತೋಟದ ಎಳನೀರು ಅದರ ಸಿಹಿ ಮತ್ತು ಸ್ವಾದಭರಿತ ಎಳೆಗಂಜಿ ಕಾರಣಕ್ಕೆ ಗೋವಾ, ಮುಂಬಯಿ ಜನರಿಗೆ ಬಲು ಪ್ರೀತಿ. ಈ ಕಾರಣಕ್ಕೆ ಇಲ್ಲಿಂದ ಹೊರ ರಾಜ್ಯಗಳಿಗೆ ಲೋಡ್‌ಗಟ್ಟಲೇ ಎಳನೀರು ರವಾನೆ ಆಗುತ್ತದೆ.

ನೀರಾವರಿ ಎಳನೀರಿಗಿಂತ ಬೆದ್ದಲು ಜಮೀನಿನ ಎಳನೀರು ಸಿಹಿ ಆಗಿರುತ್ತದೆ. ರಾಜ್ಯದ ಈ ಎಳನೀರು ಸಿಂಧನೂರು, ಬೆಳಗಾವಿ, ಮುಂಬಯಿ, ಗೋವಾಗಳಿಗೆ ರವಾನೆ ಆಗುತ್ತದೆ. ಇದರಿಂದ ರೈತರಿಗೂ ಬೆಲೆ ಸಿಗುತ್ತಿದೆ. ಚನ್ನಗಿರಿ ತಾಲೂಕಲ್ಲಿ ಸುಮಾರು 1200 ಹೆಕ್ಟೇರ್ ತೆಂಗಿನ ತೋಟವಿದೆ. ಇದರಲ್ಲಿ ಸಂತೇಬೆನ್ನೂರು ವ್ಯಾಪ್ತಿಯಲ್ಲಿ ಸುಮಾರು 300 ಹೆಕ್ಟೇರ್‌ಗಿಂತ ಹೆಚ್ಚು ತೆಂಗು ತೋಟವಿದ್ದು ಬಹಳಷ್ಟು ಬೆದ್ದಲು ಜಮೀನಿನ ತೋಟಗಳಾಗಿವೆ. ಈ ಎಳನೀರನ್ನು ರೈತರಿಂದ ಪ್ರತಿ ಎಳನೀರಿಗೆ 12 ರಿಂದ 13 ರೂ. ಖರೀದಿ ಮಾಡಿ ಗೋವಾ, ಮುಂಬಯಿಗೆ ರವಾನಿಸುತ್ತಾರೆ. 2 ತಿಂಗಳಿಗೊಮ್ಮೆ ಎಳನೀರು ಮಾರಾಟ ಮಾಡುವ ರೈತರು ವರ್ಷಕ್ಕೆ 5 ಬಾರಿ ಫಸಲು ಪಡೆಯುತ್ತಾರೆ. ವ್ಯಾಪಾರಿಗಳು ಹೊರ ರಾಜ್ಯಗಳಲ್ಲಿ ಉತ್ತಮ ಧಾರಣೆ ಇರುವುದರಿಂದ ರೈತರಿಗೂ ಉತ್ತಮ ಬೆಲೆ ಸಿಗುತ್ತಿದೆ. ಜತೆಗೆ ಕಾಯಿಗಿಂತ ಗಿಡದಿಂದ ಎಳನೀರು ತೆಗೆಯುವುದರಿಂದ ಮರವು ಹೆಚ್ಚು ಬಲಿಷ್ಠವಾಗಿ ಹಾಗೂ ಸೊಂಪಾಗಿ ಬೆಳೆಯುತ್ತದೆ ಎನ್ನುತ್ತಾರೆ ರೈತರು.

18-08-2022
V-karnataka Pg 08

3 ಎಕರೆ ತೋಟದಲ್ಲಿ 60 ವರ್ಷದ ಹಳೆಯ 45 ಮರಗಳಿವೆ. ಇದರಿಂದ ಒಂದು ಬಾರಿಗೆ 600 ಎಳನೀರು ಸಿಗುತ್ತವೆ, ಇದರಿಂದ 8 ಸಾವಿರ ಆದಾಯ ಸಿಗುತ್ತಿದೆ. ಆದರೆ ತೆಂಗಿನಕಾಯಿಯಲ್ಲಿ ಇಷ್ಟು ಲಾಭ ಸಿಗುವುದಿಲ್ಲ.
-ಸುರೇಶ್ ರೈತ, ಚಿಕ್ಕಅಬ್ಬಿಗೆರೆ

ರೈತರಿಗೆ 12 ರಿಂದ 14 ರೂ. ಬೆಲೆ ನೀಡಿ ನಾವೇ ತೋಟದಿಂದ ಎಳನೀರು ಕೆಡವಿಕೊಂಡು ಹೋಗುತ್ತೇವೆ. ರೈತರೆ ಕೆಡವಿಕೊಟ್ಟರೆ ಒಂದಕ್ಕೆ 18 ರೂ.ಬೆಲೆಯಿದೆ. ಹೊರ ರಾಜ್ಯಗಳಿಗೆ ಕಳುಹಿಸುವುದರಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತಿದೆ.
- ಸಯ್ಯದ್ ಅತೀಖ್
ಎಳನೀರು ವ್ಯಾಪಾರಿ



The grassland at Hesaraghatta. BHAGYA PRAKASH K.

Grassland or wasteland? The tussle over Hesaraghatta continues

While environmentalists have been batting for the grassland to be declared a conservation reserve, local shepherds and cattle herders fear the move would affect their livelihood

Hemanth C.S.
BENGALURU

The Hesaraghatta grassland is back on center stage following Chief Minister Basavaraj Bommai's directive to the Forest Department to conduct public consultation before declaring the grassland a conservation reserve.

During a recent meeting of the Karnataka State Wildlife Board, Mr. Bommai, who is also the chairman of the board, said the local population should be taken into confidence before any decision is arrived at. He also asked the department to submit a report once the public consultation is over.

In 2021, the Forest Department placed a proposal before the State Board for Wildlife to declare 5,010 acres of grassland as a conservation reserve which was rejected by the board. It was alleged that an MLA from the ruling party had influenced the decision.

However, in July this year, the High Court directed the State Board for Wildlife to reconsider the proposal to declare the grassland as a conservation reserve. Since then, there have been volunteer meets and signature campaigns organised by activists and environmentalists who have been batting for the grassland to be declared a reserve.

Fear among shepherds and cattle herders

Locals fear the proposal would affect their livelihood. They say there are about 100-150 shepherds and cattle herders who graze their sheep and cows on the grassland. A few of them, who spoke to *The Hindu*, expressed their concerns over the move.

"We oppose conservation reserve plan as it will hamper our livelihood. The number of shepherds and local cattle herders has decreased over the last few years," said Chennappa, a cattle herder.

Venkatesh, another cattle herder, said earlier, there were more livestock, but many have sold them in the past few years and switched to other professions."

"We are being told that a wall would be built and we would not be allowed to enter the grassland. Our cattle have been grazing here for years now. They cannot expect us to go somewhere else," said Mr. Venkatesh. He added that as the Hesaraghatta lake has filled to the brim, a major portion of the grassland has been submerged under water and thus they are having difficulty in locating new spots for the cattle to graze on.

> Our cattle have been grazing here for years now. They cannot expect us to go somewhere else.
> **VENKATESH,** cattle herder

> Grasslands help in recharging the groundwater, and this definitely benefits local people.
> **T.V. RAMACHANDRA,** Centre for Ecological Sciences, IISc.

The Hesaraghatta lake is spread over 1,100 acres. Following heavy rains, the lake is full after more than three decades, said Ramesh Kumar M., a fisherman.

He added that even farmers in and around Hesaraghatta hold very small portions of land and have to depend on cattle rearing as an additional source of income.

"Most of these farmers own about 5 to 10 guntas of land; they are dependent on their livestock to supplement their income. Making the grassland out of bound will affect them in a big way. Besides, we don't know what will happen to us. Will we be able to enter the lake and fish like we do now? There are a lot of issues which some of these activists do not understand," Mr. Ramesh added.

Environmentalists dispel concerns

Those who are in favour of declaring Hesaraghatta grasslands as a conservation reserve dispel these fears and say falsehoods are being spread by vested interests.

"When you have conservation of an ecosystem, people will benefit as forests and grasslands are known to act as sponges. Grasslands help in recharging the groundwater and retain the rainwater in the catchment and this definitely benefits the local people," said Dr. T.V. Ramachandra of the Centre for Ecological Sciences, IISc.

He added that a conservation reserve would mean that there would be restrictions on building an industrial layout or a housing society, but no one would be deprived of any access to the region.

Siddharth Goenka, member of the State Wildlife Board, during a recent meeting, clarified that a conservation reserve will not deprive the locals of development. He listed out seven misconceptions and clarified them. He said a conservation reserve will not displace locals, local communities will have a say in managing the conservation reserve, there would be no buffer zone or eco-sensitive zone, new wildlife will not be introduced, local communities will not lose access to roads, livelihoods of fishermen and farmers would be secure, and communities are custodians of the conservation reserve.

He also stated that in case the State government is unable to declare the entire 5,010 acres as a conservation reserve – a smaller area of approximately 2,800 acres consisting of 345 acres of grassland, about 1,000 acres of scrub jungle that is adjacent and to the east of the grassland and the 1,500 acres of Hesaraghatta reservoir – could be considered for the proposed conservation reserve. "I would also like to record that constituting the Hesarghatta conservation reserve will not involve any expense for the state exchequer since it involves government land only," he stated.

Rare and endangered species

Hesaraghatta is home to several rare species like the Lesser florican (*Sypheotides indicus*), European roller (*Coracias garrulous*) among others. The lake and the surrounding grassland are home to over 150 species of birds, including migrant ducks and harriers. Nearly 10 species of amphibians have also been documented.



Venkatesh, Krishnappa and Vanita who reside near the grassland. BHAGYA PRAKASH K.

Hesaraghatta grasslands

Total area
5,010 acres

Grassland
345 acres

Scrubland
1,000 acres

Hesaraghatta lake
1,100 acres

Some of the rare and endangered wildlife seen in Hesaraghatta

Lesser florican *(Sypheotides indicus)* - Schedule 1 in the Wildlife Protection Act of 1972. Last spotted in Hesaraghatta in 2012 after over 100 years

European roller *(Coracias garrulous)* - a rare migrant bird listed as vulnerable by the International Union for Conservation of Nature

Lilac silverline *(Apharitis lilacinus)* - seen in Hesaraghatta after 100 years

Indian peafowl (*Pavo cristatus)* - the national bird of India

Research Institutions located in Hesaraghatta

Indian Horticulture Research Institute

ICAR Central Institute of Freshwater Aquaculture

Indo-Danish Poultry and Dairy Farms

Grass is indeed greener on the other side

GUEST COLUMN

Seshadri K.S.

Hesaraghatta, a large reservoir along the river Arkavathy, used to be an important source of water for Bengaluru. In the last couple of months, Hesaraghatta has made a comeback into public memory and discourse. With the incessant and unseasonal rainfall lashing across the State, the reservoir is now nearly full and the last time this occurred was in 1994.

It is no surprise that hundreds of people are thronging the place to catch a glimpse of this wonderful sight. Hesaraghatta is also in the news for another reason that has far greater implications for people living in the immediate vicinity as well as the city folk.

A bit of history

The quest to protect Hesaraghatta goes back several years. In early 2013, a proposal identified nearly 5,000 acres of government-owned lands to be declared as a conservation reserve.

The proposal, based on both field and satellite data, highlighted the biodiversity supported by these grasslands and the water body, while emphasising the benefits of ecosystem services and water security.

A conservation reserve was sought under the provisions of the Wildlife Protection Act because it enables government-owned land to be conserved while allowing legitimate user access. The rights continue to remain with legitimate users, and regulations are formed by a committee comprising the local representatives and the forest department. There would be no question of forced evictions or voluntary translocations of people.

How grasslands help

Grassland-savanna ecosystems are one of the common habitats across the country, and span nearly 10% of India's landscape. These ecosystems are not forested in the sense of having tall trees, and yet they are known to harbour some of the rarest forms of vegetation and provide several critical ecosystem functions.

Grasslands are incredibly effective in capturing atmospheric carbon and storing them in the soil, a process known as carbon sequestration. Despite the importance, the savanna-grassland ecosystems are conveniently painted as wastelands in policy documents. They are subsequently let to degrade or are converted to different land uses and parcelled off for infrastructure.

Ecosystem services and water security

How can a conservation reserve somewhere far away make our lives better? As a case in point, we have all experienced the consequences of rainfall and lack of city planning. The villagers surrounding the lake were spared from the wrath of floods largely because the lake was able to take in the excess runoff and hold it, slowly recharging wells and ensuring water security. Images of water overflowing from borewells were a common sight. By protecting the 5,000 acres of government-owned land, we would ensure that

Nearly 97 million litres of water per day can be stored and recharge our groundwater. This water will ensure the city has enough water, should we choose to restore the old water supply network.

The farmers around the lake would directly benefit from being able to grow water-intensive cash crops. Plus, we all would have fresh air to breathe and less carbon in the atmosphere.

Potential for bioresources

Hesaraghatta also holds immense potential for bioresources. In 1957, a tiny little insect named *Neodusmetia sangwani* was discovered in Hesaraghatta. In 1960, this tiny insect was successfully deployed to control the rampant Rhodesgrass Scale infestation in the United States. In one of the few cases of successful biocontrol, the scale infestation was reduced, and the golf and cattle ranch industry was saved upwards of $200 million/year that they would have otherwise spent on pest management using toxic chemicals.

Our myopic thirst for development will only result in short-term gains. Failure to protect the unique grasslands and the surrounding habitat comes at a future cost of having missed out on ecosystem services and water security for the entire city.

Can we afford to go on with double standards where we happily cheer the release of an exotic large cat in place of an extinct one and call it panacea for grassland conservation, while at the same time, we stop short of walking the talk and protect the last remaining natural tracts of grasslands around us?

(Dr. Seshadri K.S. is a faculty member at ATREE, Bengaluru. Views are personal.)

ರಾಗಿ ಪರ ಪ್ರಧಾನಿ ಮೋದಿ ಬ್ಯಾಟಿಂಗ್

ರಾಗಿ ತಿಂದವನಿಗೆ ರೋಗವಿಲ್ಲ | ಅಪೌಷ್ಟಿಕತೆ, ಹಸಿವು ನೀಗಿಸುತ್ತದೆ | ಜಿ20 ಯಲ್ಲಿ ಪ್ರಧಾನಿ ಮುಕ್ತ ಮಾತು



ಇಂಡೋನೇಷ್ಯಾದಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ ಮಾತನಾಡುತ್ತಾ ಪ್ರಧಾನಿ ನರೇಂದ್ರ ಮೋದಿ ಅವರು ಅಪೌಷ್ಟಿಕತೆ ಮತ್ತು ಹಸಿವನ್ನು ಪರಿಹರಿಸುವಲ್ಲಿ ರಾಗಿಗಳ ಪಾತ್ರವನ್ನು ಎತ್ತಿ ಹಿಡಿದಿದ್ದಾರೆ. ಈ ಮೂಲಕ ಭಾರತೀಯ ಸೂಪರ್‌ಫುಡ್ ರಾಗಿಯ ಮಹತ್ವದ ಜಗತ್ತಿನ ಗಮನ ಸೆಳೆದಿದೆ. 'ಭಾರತದಲ್ಲಿ, ಸುಸ್ಥಿರ ಆಹಾರ ಭದ್ರತೆಗಾಗಿ, ನಾವು ನೈಸರ್ಗಿಕ ಕೃಷಿಯನ್ನು ಉತ್ತೇಜಿಸುತ್ತಿದ್ದೇವೆ ಮತ್ತು ರಾಗಿಯಂತಹ ಪೌಷ್ಟಿಕ ಮತ್ತು ಸಾಂಪ್ರದಾಯಿಕ ಆಹಾರ ಧಾನ್ಯಗಳನ್ನು ಮರು-ಜನಪ್ರಿಯಗೊಳಿಸುತ್ತಿದ್ದೇವೆ. ರಾಗಿಗಳು ಜಾಗತಿಕ ಅಪೌಷ್ಟಿಕತೆ ಮತ್ತು ಹಸಿವನ್ನು ಸಹ ಪರಿಹರಿಸಬಹುದು. ನಾವೆಲ್ಲರೂ ಮುಂದಿನ ವರ್ಷ ಅಂತಾರಾಷ್ಟ್ರೀಯ ರಾಗಿ ವರ್ಷವನ್ನು ಅತ್ಯಂತ ಉತ್ಸಾಹದಿಂದ ಆಚರಿಸಬೇಕು' ಎಂದು ಪ್ರಧಾನಿ ಹೇಳಿದರು.

ಭಾರತೀಯರು ಮತ್ತು ರಾಗಿ

ಜಾಗತಿಕ ಉತ್ಪಾದನೆಯಲ್ಲಿ ರಾಗಿ ಸುಮಾರು 41 ಪ್ರತಿಶತದಷ್ಟು ಪಾಲನ್ನು ಹೊಂದಿದ್ದು, ವಿಶ್ವದಲ್ಲಿ ಭಾರತವು ರಾಗಿ ಉತ್ಪಾದನೆಯ ಪ್ರಮುಖ ಉತ್ಪಾದಕರಲ್ಲಿ ಒಂದಾಗಿದೆ. 2020ರಲ್ಲಿ, 30.464 ಮಿಲಿಯನ್ ಮೆಟ್ರಿಕ್ ಟನ್‌ಗಳ ವಿಶ್ವ ಉತ್ಪಾದನೆಯಲ್ಲಿ ಭಾರತದ ಪಾಲು 12.49 ಆಗಿತ್ತು. ವರದಿಗಳ ಪ್ರಕಾರ, ದೇಶವು 2021-22ರಲ್ಲಿ ರಾಗಿ ಉತ್ಪಾದನೆಯಲ್ಲಿ 27 ಪ್ರತಿಶತ ಬೆಳವಣಿಗೆಯನ್ನು ದಾಖಲಿಸಿದೆ. ರಾಗಿ ಭಾರತದ ಪ್ರಧಾನ ಆಹಾರವಾಗಿದೆ. ವಿಶೇಷವಾಗಿ ಮಧ್ಯ ಮತ್ತು ದಕ್ಷಿಣ ಭಾರತ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ 1940 ಮತ್ತು 50ರ ದಶಕಗಳಲ್ಲಿ ಗೋಧಿ ಮತ್ತು ಅಕ್ಕಿಯ ಬದಲು ರಾಗಿಯೇ ಹೆಚ್ಚು ಬಳಕೆಯಲ್ಲಿತ್ತು. ಪೌಷ್ಟಿಕಾಂಶವುಳ್ಳ ರಾಗಿಗಳನ್ನು ಬಳಕ ಗ್ರಾಮೀಣ ಭಾರತದ ಪಾಕ ಪದ್ಧತಿಗಳಿಗೆ ತಳ್ಳಲಾಯಿತು, ಆದರೆ ಕೆಲವು ವರ್ಷಗಳ ಹಿಂದೆ ಈ ಧಾನ್ಯ ಹೆಚ್ಚು ಬಳಕೆಯಲ್ಲಿವೆ. ಆರೋಗ್ಯಕರ ತಿನ್ನುವ ಪ್ರವೃತ್ತಿಯಲ್ಲಿನ ಉಲ್ಬಣದಿಂದಾಗಿ ರಾಗಿಯ ಮಹತ್ವ ಪುನರುಜ್ಜೀವನಗೊಂಡಿತು.

ರಾಗಿಯಿಂದ ಅಚ್ಚರಿಯ ಲಾಭಗಳು

ರಾಗಿ ಪ್ರೋಟೀನ್, ಫೈಬರ್, ಜೀವಸತ್ವಗಳು ಮತ್ತು ಖನಿಜಗಳನ್ನು ಒಳಗೊಂಡಿರುವುದರಿಂದ ಇದನ್ನು ಪೋಷಕಾಂಶಗಳ ಉಗ್ರಾಣ ಎಂದು ಕರೆಯಲಾಗುತ್ತದೆ. ದೇಶದಲ್ಲಿ ಲಭ್ಯವಿರುವ ವಿವಿಧ ರೀತಿಯ ರಾಗಿಗಳು ಜೋಳ (ಬಿಳಿ ರಾಗಿ), ರಾಗಿ (ಫಿಂಗರ್ ರಾಗಿ), ಕೊರ್ರಾ (ಫಾಕ್ಸ್‌ಟೈಲ್ ರಾಗಿ), ಅರ್ಕ್ (ಕೊಡೋ ರಾಗಿ), ಸಾಮ (ಚಿಕ್ಕ ರಾಗಿ), ಬಾಜ್ರಾ (ಮುತ್ತು ರಾಗಿ), ಚೆನಾ/ಬಾರ್ (ಪ್ರೊಸೊ) ರಾಗಿ) ಮತ್ತು ಸನ್ವಾ (ಅಂಬಾರಿ ರಾಗಿ) ಎಂಬಿವುಗಳಾಗಿವೆ.



ಆರೋಗ್ಯಕ್ಕೆ ಯಾವುದು ಒಳ್ಳೇದು?

ಅಪೌಷ್ಟಿಕತೆಯನ್ನು ಹೋಗಲಾಡಿಸಲು ಅತ್ಯುತ್ತಮ ಆಧ್ಯಯನಗಳು ಇತ್ತೀಚೆಗೆ ಈ 'ಸ್ಮಾರ್ಟ್ ಆಹಾರ'ದ ಆರೋಗ್ಯ ಪ್ರಯೋಜನಗಳನ್ನು ಎತ್ತಿ ತೋರಿಸುತ್ತಿವೆ. ಅರೆ-ಶುಷ್ಕ ಉಷ್ಣವಲಯದ



ಅಂತಾರಾಷ್ಟ್ರೀಯ ಬೆಳೆಗಳ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ- ಪೌಷ್ಟಿಕಾಂಶದ ಡಾ ಎಸ್ ಅನಿತಾ ನೇತೃತ್ವದಲ್ಲಿ, ನಾಲ್ಕು ದೇಶಗಳಲ್ಲಿ ಏಳು ಸಂಸ್ಥೆಗಳು ನಡೆಸಿದ ಇತ್ತೀಚಿನ ಅಧ್ಯಯನದ ಪ್ರಕಾರ, ರಾಗಿ ಮಕ್ಕಳು ಮತ್ತು ಹದಿಹರೆಯದವರಲ್ಲಿ ಶೇಕಡಾ 26-39 ರಷ್ಟು ಬೆಳವಣಿಗೆಯನ್ನು ಹೆಚ್ಚಿಸಬಹುದು. ಅಕ್ಕಿಯ ಬದಲು ರಾಗಿಯ ಸೇವನೆ. ಅಪೌಷ್ಟಿಕತೆಯನ್ನು ಹೋಗಲಾಡಿಸಲು ರಾಗಿ ಗಮನಾರ್ಹವಾಗಿ ಕೊಡುಗೆ ನೀಡುತ್ತದೆ ಎಂದು ಅಧ್ಯಯನದ ಫಲಿತಾಂಶಗಳು ಸೂಚಿಸುತ್ತವೆ. ರಾಗಿಯಲ್ಲಿ 344 ಗ್ರಾಂ ಕ್ಯಾಲ್ಸಿಯಂ ಇದ್ದರೆ, ಅಕ್ಕಿಯಲ್ಲಿ 33 ಗ್ರಾಂ ಮತ್ತು ಗೋಧಿ ಯಲ್ಲಿ 30 ಗ್ರಾಂ. ಮತ್ತು ರಾಗಿಯು ಅಕ್ಕಿ ಮತ್ತು ಗೋಧಿಗಿಂತ 55.6 ರಷ್ಟು ಹೆಚ್ಚಿನ ಫೈಬರ್ ಅನ್ನು ಹೊಂದಿರುತ್ತದೆ, ಇದು ಮುಖ್ಯವಾಗಿದೆ ಏಕೆಂದರೆ ಫೈಬರ್ ಪೋಷಣೆಯಲ್ಲಿ ಪ್ರಮುಖ ಅಂಶವಾಗಿದೆ ಮತ್ತು ಅಧಿಕ ರಕ್ತದ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಬಡವರ ಆಹಾರ ರಾಗಿ

ಆರೋಗ್ಯಕರ ಆಹಾರದ ಪ್ರತಿಪಾದಕರ ಗಮನ ಸೆಳೆಯುವವರೆಗೂ ರಾಗಿ ತಳಿಗಳಿಗೆ 'ಬಡವರ ಆಹಾರ' ಎಂಬ ಹಣೆಪಟ್ಟಿ ಅಂಟಿಕೊಂಡಿತ್ತು. ಜುಲೈ 2021 ರಲ್ಲಿ ಫ್ರಾಂಟಿಯರ್ಸ್ ಇನ್ ನ್ಯೂಟ್ರಿಷನ್‌ಗಳಲ್ಲಿ ಪ್ರಕಟವಾದ ಅಧ್ಯಯನವು ರಾಗಿಗಳ ನಿಯಮಿತ ಸೇವನೆಯು ಸರಾಸರಿ ಉಪವಾಸದ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ಶೇಕಡಾ 12 ರಷ್ಟು ಮತ್ತು ಊಟದ ನಂತರದ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಶೇಕಡಾ 15ರಷ್ಟು ಕಡಿಮೆ ಮಾಡುತ್ತದೆ ಎಂದು ತೋರಿಸುತ್ತದೆ. ಬಿಳಿ ಅಕ್ಕಿ ಮತ್ತು ಸಂಸ್ಕರಿಸಿದ ಗೋಧಿಯಂತಹ ಪರ್ಯಾಯಗಳಿಗಿಂತ ರಾಗಿಗಳು ಕಡಿಮೆ ಗ್ಲೈಸೆಮಿಕ್ ಸೂಚಿ ಹೊಂದಿರುವುದರಿಂದ ಇದು ಸಂಭವಿಸುತ್ತದೆ.

ರಾಗಿ ಮಿಶ್ರ ಬೆಳೆ

ಭಾರತದಲ್ಲಿ, ರಾಗಿಗಳನ್ನು ಸಾಮಾನ್ಯವಾಗಿ ಮಿಶ್ರ ಬೆಳೆಗಳಾಗಿ ಬೆಳೆಯಲಾಗುತ್ತದೆ, ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ. ರಾಗಿಯ ಬಹುತೇಕ ತಳಿಗಳು ಬಿತ್ತನೆಯಿಂದ ಕೊಯ್ಲುವರೆಗೆ ಬೇಸಾಯಕ್ಕೆ ಕೇವಲ 3-4 ತಿಂಗಳುಗಳನ್ನು ತೆಗೆದುಕೊಳ್ಳುತ್ತದೆ. ಪ್ರಸ್ತುತ, ರಾಗಿಗಳನ್ನು ಮುಖ್ಯವಾಗಿ ಉತ್ತರ ಪ್ರದೇಶ, ಒಡಿಶಾ, ಪಂಜಾಬ್, ಮಧ್ಯಪ್ರದೇಶ, ಚತ್ತೀಸ್‌ಗಢ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲಿ ಬೆಳೆಯಲಾಗುತ್ತದೆ. ಒಡಿಶಾ, ಅಸ್ಸಾಂ, ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳು ರಾಗಿ ಕೃಷಿ ಹೆಚ್ಚಿಸಲು ಕ್ರಮ ಕೈಗೊಂಡಿವೆ. ಭಾರತವು ಯುನೈಟೆಡ್ ಅರಬ್ ಎಮಿರೇಟ್ಸ್, ನೇಪಾಳ, ಸೌದಿ ಅರೇಬಿಯಾ, ಯುಕೆ ಮತ್ತು ಯುನೈಟೆಡ್ ಸ್ಟೇಟ್‌ಗಾಗಿ ರಾಗಿ ರಫ್ತು ಮಾಡುತ್ತಿದ್ದರೂ ಇದು ಒಟ್ಟು ರಾಗಿ ಉತ್ಪಾದನೆಯಲ್ಲಿ ಕೇವಲ ಒಂದು ಶೇಕಡಾಕ್ಕೆ ಬರುತ್ತದೆ.

18-08-2022
Viswavani Pg 09

Policy to encourage farmers to take up sandalwood cultivation

The Hindu Bureau
BENGALURU

The State Cabinet on Thursday adopted the sandalwood policy that would liberate the marketing of sandalwood from government control and encourage farmers to take to sandalwood cultivation.

Briefing media persons after the Cabinet meeting, Health and Medical Education Minister K. Sudhakar said the new policy also envisages measures to provide protection to sandalwood farms. "We will use technology to provide protection to farms like installing microchips that can help detect theft," the Minister said. The main intention is to help increase the income of farmers, he said, while pointing out that there was a severe shortage of sandalwood in the State as well as the country. Karnataka is one of the major sandalwood growing regions in the country.

Transfer of spouses

The Cabinet also decided to bring about changes in the norms to allow inter-district transfer of spouses for 'C' and 'D' grade government employees after putting in certain years of service at a particular place. The Minister said different departments had prescribed their own minimum service period for the employees to become eligible for such transfers.

The Cabinet gave administrative clearance for upgrading 43 primary health centres into community health centres. Of them, upgrading of 38 PHCs would cost ₹397 crore, the Minister said.

It gave administrative approval for setting up a critical care hospital with a 100-bed capacity at the premises of the district hospital in Tumakuru at a cost of ₹56 crore under the PM-Ayushman Bharat Health Infrastructure Mission, he said. The hospital was recently in the news for turning away a woman in labour, resulting in her death and also of the newborns.

New sanctuaries

The Minister said the Cabinet approved a proposal by the Karnataka State Wildlife Board to provide sanctuary status to Huture Gudda (wildlife), Bankapura (wildlife), Arsikere (bear sanctuary), Hiresulikere (bear sanctuary), and Chikkasangama, Mundigekere and Bonala (bird sanctuaries).

Winter session from Dec. 19

The Hindu Bureau
BENGALURU

The winter session of the State legislature will be held in Belagavi from December 19 to 30. A decision to this effect was taken at the State Cabinet meeting on Thursday.

Generally, the winter session used to be held before Christmas. However, the session is now being held in the middle of the Christmas season. The ongoing Jana Samparka Yatre of the ruling BJP is being attributed as the reason for the session being pushed till Christmas.

18-08-2022
Hindu Pg 06